ಅಧ್ಯಕ್ಷರು.—ಪ್ರಶ್ನೆ ೫೪ (೩೫೯) ಶ್ರೀ ಬಿ.ಹೆಚ್. ಯಂಕಾನಾಯ್ಕ ಮತ್ತು ಪ್ರಶ್ನೆ ೫೫ (೩೧೨) ಶ್ರೀ ಜ್ಞಾನದೇವ ದೊಡ್ಡಮೇಟಿ ಇವರ ಪ್ರಶ್ನೆಯನ್ನು ಮುಂದಕ್ಕೆ ಹಾಕಲಾಗಿದೆ. ಪ್ರಶ್ನೆ ೫೫ (೩೧೨) ಶ್ರೀ ಗೋಪಾಲ ಮುಕುಂದ ಕಾನಡೆ, ತಾವು ಕೇಳಿ.

ಶ್ರೀ ಎಸ್. ಬಂಗಾರಪ್ಪ.—ನಾವು ಈ ಸದನಕ್ಕೆ ಬಂದಿರುವುದು ನಮ್ಮ ಪ್ರಶ್ನೆಗಳಿಗೆ ಉತ್ತರ ಗಳನ್ನು ಪಡೆಯಲು. ನಾನು ಇಲ್ಲಿ ೩ ದಿವಸದಿಂದಲೂ ನೋಡುತ್ತಿದ್ದೇನೆ ಇರತಕ್ಕ ಪ್ರಶ್ನೆಗಳಲ್ಲಿ ಅರ್ಧಕ್ಕಿಂತ ಹೆಚ್ಚು ಪ್ರಶ್ನೆಗಳನ್ನು ತಾವು ಮುಂದಕ್ಕೆ ಹಾಕುತ್ತಿದ್ದೀರಿ ಅದು ಸರ್ಕಾರದ ಅಭಿಪ್ರಾಯದ ಪ್ರಕಾರ. ಇದು ಸರಿಯಲ್ಲ. ಶ್ರೀ ಯಂಕಾನಾಯ್ಕರ ಪ್ರಶ್ನೆ ಏನು ಇದೆ ಅದಕ್ಕೆ ಉತ್ತರವನ್ನು ಒದಗಿಸಲು ನನಗೆ ತಿಳಿದ ಹಾಗೆ ಏನೂ ತೊಂದರೆ ಇಲ್ಲ.

ಅಧ್ಯಕ್ಷರು.—ಒಟ್ಟು ೯ ಪ್ರಶ್ನೆಗಳನ್ನು ಆ ಕಡೆ, ಈ ಕಡೆ ಎಲ್ಲಾ ಸದಸ್ಯರುಗಳದ್ದೂ ಸೇರಿ ಮುಂದಕ್ಕೆ ಹಾಕಿದ್ದೇವೆ. ಮಾನ್ಯ ಲಕ್ಷ್ಮೀಸಾಗರ್‌ರವರು ತಾವು ಏನು ಮಾಡಬೇಕೆಂಬುದನ್ನು ಹೇಳಿ.

ಶ್ರೀ ಎ. ಲಕ್ಷ್ಮೀಸಾಗರ್.—ಅವರು ಹಲವಾರು ವರ್ಷಗಳ ವಿವರಣೆಯನ್ನು ಕೇಳಿದ್ದಾರೆ.....

(ಗೊಂದಲ)

ಶ್ರೀ ಆರ್.ಎನ್. ನಾಯಕ್.—ಅಧಿಕಾರಿಗಳು ನಿಮ್ಮ ಮಾತನ್ನು ಕೇಳುವುದಿಲ್ಲ.

ಶ್ರೀ ಬಿ.ಎಂ. ಇದಿನಬ್ಬ.—ಉಪ ಪ್ರಶ್ನೆಗಳನ್ನು ಕೇಳಲು ಸದನದಲ್ಲಿ ನಮಗೆ ಅಧಿಕಾರ ಉಂಟು.

ಶ್ರೀ ಎಸ್. ಬಂಗಾರಪ್ಪ.—ಶ್ರೀ ಯಂಕಾನಾಯ್ಕರ ಪ್ರಶ್ನೆ ಏನು ಇದೆ ಎಂದರೆ ಬಳ್ಳಾರಿ ಜಿಲ್ಲೆ ಯಲ್ಲಿ ಒಟ್ಟು ಎಷ್ಟು ನಿವೇಶನಗಳನ್ನು ಕೃಷಿ ಗ್ರಾಮ ಸೇವಕರಿಗೆ ಮಂಜೂರು ಮಾಡಲಾಗಿದೆ ಎಂದು. ಅವರು ಬರೀ ಬಳ್ಳಾರಿ ಜಿಲ್ಲೆಯ ಕೃಷಿ ಗ್ರಾಮ ಸೇವಕರ ಪ್ರಶ್ನೆಯನ್ನು ಕೇಳಿದ್ದಾರೆ. ಇದನ್ನು ಒದಗಿಸಲು ಏನು ಕಷ್ಟ?

ಅಧ್ಯಕ್ಷರು.—ನಾವೂ ಇದರ ಬಗ್ಗೆ ಸ್ವಲ್ಪ ವಿಚಾರ ಮಾಡೋಣ. ಅಸೆಂಬ್ಲಿ ಪ್ರಾರಂಭವಾಗು ವುದಕ್ಕೆ ಮೊದಲು ಇಷ್ಟು ದಿವಸದೊಳಗೆ ಪ್ರಶ್ನೆಗಳನ್ನು ಕಳುಹಿಸಬೇಕೆಂದು ಇದೆ. ಈ ಅವಧಿಯನ್ನು ಹೆಚ್ಚು ಮಾಡಬೇಕೋ ಏನೋ ನೀವೂ ನಾವು ಎಲ್ಲರೂ ಕೂಡಿ ಇದಕ್ಕೆ ಪರಿಹಾರ ಏನು ಮಾಡ ಬೇಕೆಂಬುದನ್ನು ನೋಡೋಣ.

ಶ್ರೀ ಅಬ್ದುಲ್ ನಜೀರ್ ಸಾಬ್.—ಶ್ರೀ ಯಂಕಾನಾಯ್ಕರ ಪ್ರಶ್ನೆ ಏನು ಇದೆ ಎಂದರೆ ಅದು ಈ ರೀತಿ ಇದೆ:

> "(a) the total number of sites allotted to the agricultural Gramasevakas in Bellary District, out of them the number of sites allotted to different taluks and its names".

ಈ ಸೈಟ್ ಡಿಸ್ಟ್ರಿಬ್ಯೂಷನ್, ವ್ಯವಸಾಯ ಇಲಾಖೆ ಹಾಗೂ ಇತರ ಇಲಾಖೆಗಳಲ್ಲಿ ಬರುತ್ತದೆ.

ಶ್ರೀ ಎಸ್. ಬಂಗಾರಪ್ಪ.—ನಾವು ಪ್ರಶ್ನೆಗಳನ್ನು ಕಳುಹಿಸಿಕೊಟ್ಟಮೇಲೆ ಇನ್ನೂ ಹೆಚ್ಚು ಕಾಲಾವಕಾಶವನ್ನು ಕೊಡಬೇಕೆಂಬುದರ ಬಗ್ಗೆ ತಾವು ಹೇಳಿದಿರಿ. ಆದರೆ ಈಗ ಇರತಕ್ಕಂಥ ಕಾಲಾವಕಾಶ ಕಡಿಮೆ ಏನೂ ಇರುವುದಿಲ್ಲ. ಸುಮಾರು ಒಂದು ತಿಂಗಳ ಮೊಪಲೇ ಪ್ರಶ್ನೆಗಳನ್ನು ಕಳುಹಿಸಿಕೊಡ ಬೇಕಾಗಿದೆ. ಇವರೇನೂ ನಡೆದುಕೊಂಡು ಹೋಗಿ ಗುಲ್ಬರ್ಗ ಜಿಲ್ಲೆಯಲ್ಲಿ ಉತ್ತರ ತರುವುದಿಲ್ಲ. ಮಾನ್ಯ ದೊಡ್ಡಮೇಟಿಯವರ ಪ್ರಶ್ನೆ ಏನು ಇದೆ ಎಂದರೆ ಧಾರವಾಡ ಜಿಲ್ಲೆಯಲ್ಲಿ ವಕ್ಫ್ ಮಂಡಲಿಗಳ ಹಣ ದುರುಪಯೋಗ ಹಾಗೂ ಅವ್ಯವಹಾರಗಳ ಪ್ರಕರಣಗಳೆಷ್ಟು ಎಂದು ಇದೆ. ಈ ಪ್ರಶ್ನೆಯೂ ಕೂಡ ಮುಂದಕ್ಕೆ ಹೋಯಿತು, ಈ ಅವ್ಯವಹಾರದ ಪ್ರಕರಣ ಇಷ್ಟು ಎಂದು ಇರುತ್ತದೆ, ಕಂಪ್ಲೆಂಟ್ ಎಷ್ಟು ಎಂದು ಇರುತ್ತದೆ, ಇದಕ್ಕೆ ಉತ್ತರ ತರಿಸಲು ಏನು ತೊಂದರೆ ಇದೆ? ಇವರೇನೂ ಧಾರವಾಡಕ್ಕೆ ಗುಲ್ಬರ್ಗಕ್ಕೆ ಅಥವಾ ಹರಪನಹಳ್ಳಿಗೆ ನಡೆದುಕೊಂಡು ಹೋಗಿ ಉತ್ತರ ತರಬೇಕೆಂದು ಪ್ರಶ್ನೆ ಇಲ್ಲ, ಇವರ ಹತ್ತಿರ ಫೋನ್, ಪೋಲೀಸ್, ವೈರ್‌ಲೆಸ್ ಮುಂತಾದ ಎಲ್ಲಾ ವ್ಯವಸ್ಥೆ ಇದೆ. ಆದ್ದರಿಂದ ನಮ್ಮ ಪ್ರಶ್ನೆಗಳಿಗೆ ಈ ಸದನದಲ್ಲಿ ಉತ್ತರವನ್ನು ಪಡೆದುಕೊಳ್ಳಲು ನಮ್ಮ ಹಕ್ಕು ಇದೆ.

ನಮಗೆ ಇಪ್ಪತ್ತೆಂಟು ತೊಂದರೆ ಇರುತ್ತೆ. ಇಲ್ಲಿ ನಾವು ೮-೧೦ ದಿವಸ ಮಾತ್ರ ಸೇರುತ್ತೇವೆ. ಅಷ್ಟರಲ್ಲಿ ನಮಗೆ ಎಲ್ಲಾ ಉತ್ತರಗಳು ಬರಲೇಬೇಕು. ನೀವು ಸುತ್ತೋಲೆಯನ್ನು ಏತಕ್ಕೆ ಕಳುಹಿಸುತ್ತೀರಿ? ಪ್ರಶ್ನೆಗಳನ್ನು ನಾವು ಇಷ್ಟು ದಿವಸದೊಳಗೆ ಕೊಡಬೇಕೆಂದು ನೀವು ನಮಗೆ ಏತಕ್ಕೆ ತಿಳಿಸುತ್ತೀರಿ? ಈ ಸರ್ಕಾರ ಮಲಗಿರತಕ್ಕ ಸರ್ಕಾರವಾಗಿದೆ. ಈ ರೀತಿ ಆದರೆ ನಾವು ಪ್ರಶ್ನೆಗಳನ್ನು ಏತಕ್ಕೆ ಕೇಳಬೇಕು? ಅಧಿಕಾರಿಗಳು ಇವರ ಮಾತನ್ನು ಕೇಳುವುದಿಲ್ಲ.

ಅಧ್ಯಕ್ಷರು.—ಈಗ ಹೇಳಿದ್ದಾರೆ ನೋಡೋಣ.

ಶ್ರೀ ಎಸ್. ಬಂಗಾರಪ್ಪ.—ಅರ್ಧದಷ್ಟು ಹಣ ಆಡಳಿತಕ್ಕೆ ಹೋಗುತ್ತದೆ. ಉತ್ತರ ಒದಗಿಸುವುದಕ್ಕೆ ಇವರಿಗೆ ಏನು ತೊಂದರೆ? I am requesting you to pull up this Government.

(ಗೊಂದಲ)

ಅಧ್ಯಕ್ಷರು.—ನೀವು ಹೇಳುವುದನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ಸಂಸದೀಯ ವ್ಯವಹಾರ ಮಂತ್ರಿಗಳು ಈಗಾಗಲೇ ಹೇಳಿದ್ದಾರೆ, ನಾನೂ ಹೇಳಿದ್ದೇನೆ.

(ಗೊಂದಲ)

MR. SPEAKER.—Nothing will go on record. ಆದಷ್ಟು ಬೇಗ ತರಿಸಿ ಕೊಡುವ ವ್ಯವಸ್ಥೆ ಮಾಡುತ್ತೇವೆಂದು ಸಂಸದೀಯ ಮಂತ್ರಿಗಳು ಹೇಳಿದ್ದಾರೆ. ಅವರೂ ನಾವು, ನೀವೂ ಎಲ್ಲಾ ಕೂಡಿ ಮುಂದೆ ಈ ರೀತಿ ಹಾಗದ ಹಾಗೆ ನೋಡಿಕೊಳ್ಳಲು ಏನು ಮಾಡಬೇಕು ಎಂಬುದನ್ನು ಯೋಚನೆ ಮಾಡೋಣ. ಇಷ್ಟು ಹೇಳಿದರೂ ನಿಮಗೆ ಸಮಾಧಾನವಾಗುವುದಿಲ್ಲ ಎಂದರೆ ಹೇಗೆ?

ಶ್ರೀ ಎಸ್. ಬಂಗಾರಪ್ಪ.—ಸರ್ಕಾರದವರು ಇಲ್ಲಿ ತಪ್ಪು ಮಾಡಿದ್ದಾರೆ ಎನ್ನುವ ವಿಚಾರವನ್ನು ತಾವು ಒಪ್ಪಿದ್ದೀರಿ ಎಂದು ನಾನು ತಿಳಿದುಕೊಂಡಿದ್ದೇನೆ.

ಅಧ್ಯಕ್ಷರು.—ಶ್ರೀ ಬಂಗಾರಪ್ಪನವರೇ ಎಷ್ಟು ಸಾರಿ ಹೇಳುವುದು?

(ಗೊಂದಲ)

MR. SPEAKER.—Nothing will go on record.

(ಗೊಂದಲ)

ಅಧ್ಯಕ್ಷರು.—ಆದಷ್ಟು ಬೇಗ ಉತ್ತರ ತರಿಸಿಕೊಡಿರಿ ಎಂದು ಹೇಳುತ್ತೇನೆ. ದಯವಿಟ್ಟು ತಾವು ಕೂಡಿರಿ.

(ಗೊಂದಲ)

MR. SPEAKER.—Nothing will go on record. ದಯವಿಟ್ಟು ತಾವು ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು.—ತಾವುಗಳು ಮಾತನಾಡುವುದು ರಿಕಾರ್ಡ್‌ಗೆ ಹೋಗುವುದಿಲ್ಲ. ನಾನು ಆ ಕಡೆಯವರಿಗೂ, ಈ ಕಡೆಯವರಿಗೂ ಹೇಳಿದ್ದೇನೆ. ಅವರು ಆದಷ್ಟು ಬೇಗ ಉತ್ತರ ಒದಗಿಸುತ್ತೇನೆಂದು ಹೇಳಿದ್ದಾರೆ. ಮುಂದೆ ಈ ರೀತಿ ಆಗದಂತೆ ವ್ಯವಸ್ಥೆ ಮಾಡಿ ಎಂದು ಹೇಳಿದ್ದೇನೆ.

ಶ್ರೀ ಧರ್ಮಸಿಂಗ್.—ಹೀಗಾದರೆ ಸರ್ಕಾರ ಏಕೆ ಇರಬೇಕು?

(ಗೊಂದಲ)

ಅಧ್ಯಕ್ಷರು.—ನಾನು ವ್ಯವಸ್ಥೆ ಮಾಡಿಸುತ್ತೇನೆ. ಅವರನ್ನೂ ನಿಮ್ಮನ್ನೂ ಕರೆಯಿಸಿ ವ್ಯವಸ್ಥೆ ಮಾಡಿಸುತ್ತೇನೆ. ಸಂಸದೀಯ ವ್ಯವಹಾರಗಳ ಮಂತ್ರಿಗಳನ್ನೂ, ನಿಮ್ಮನ್ನೂ ಕರೆದು, ನಾವೂ

ನೀವೂ ಕೂಡಿ ಡಿಸ್ಕಸ್ ಮಾಡಿ ಮುಂದೆ ಈ ರೀತಿ ಆಗದಂತೆ ವ್ಯವಸ್ಥೆ ಮಾಡೋಣ. ಈಗ ಗೋಪಾಲ ಮುಕುಂದ ಕಾನಡೆಯವರು ಪ್ರಶ್ನೆ ಕೇಳಲಿ.

ಶ್ರೀ ಆರ್.ಎನ್. ನಾಯಕ್.—ತಾವು ಅವರಿಗೆ ಒಂದು ಎಚ್ಚರಿಕೆ ಕೊಡಿ.

ಶ್ರೀ ಬಿ. ಬಸವಲಿಂಗಪ್ಪ.—ನಾನು ವಿನಯಪೂರ್ವಕವಾಗಿ ಕೇಳುತ್ತಾ ಇದ್ದೇನೆ. ನಮ್ಮ ಸಂಕಟವನ್ನು ನಿಮ್ಮ ಎದುರಿಗೆ ಹೇಳಬೇಕಲ್ಲವೇ? ಪ್ರಾಮುಖ್ಯಾದಂಥ ವಿಷಯಗಳ ಬಗ್ಗೆ ಉತ್ತರ ತರಿಸಲಿಕ್ಕೆ ಈ ಸರ್ಕಾರ ಅಸಮರ್ಥವಾಗಿದೆ, ಇದು ಅವರ ನಿರ್ಲಕ್ಷ್ಯತನ ಇರಬಹುದು. ತಾವು ಅವರಿಗೆ ಹೆದರಿಕೆ ಕೊಡಿ, ಹೆದರಿಕೆ ಕೊಡದೇಹೋದರೆ ಹೇಗೆ? ತಾವು ಅವರಿಗೆ ಎಚ್ಚರಿಕೆ ಕೊಡಬೇಕು.

ಶ್ರೀ ಅಬ್ದುಲ್ ನಜೀರ್ ಸಾಬ್.—ಮಾನ್ಯ ಹಿರಿಯ ಸದಸ್ಯರಾದ ಬಂಗಾರಪ್ಪನವರು ಮಂತ್ರಿಗಳಾಗಿದ್ದರು, ವಿರೋಧಪಕ್ಷದ ನಾಯಕರಾಗಿದ್ದರು. ಅವರು ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಬೇಕು. ಮಾನ್ಯ ಸದಸ್ಯರು ವಕ್ಫ್ ಮಂಡಲಿಗಳಲ್ಲಿ ಆಗಿರುವ ಹಣ ದುರುಪಯೋಗ ಮತ್ತು ಅವ್ಯವಹಾರಗಳ ಬಗ್ಗೆ ಪ್ರಶ್ನೆ ಕೇಳಿದ್ದಾರೆ. ಅದರ ಬಗ್ಗೆ ಉತ್ತರ ತರಿಸಬೇಕು. ವಕ್ಫ್ ಮಂಡಲಿ ಸ್ವಾಯತ್ತ ಸಂಸ್ಥೆ, ಅವರು ಕಾಲಬೇಕು ಎಂದು ಕೇಳಿಕೊಂಡಿದ್ದಾರೆ. ಈ ಪ್ರಶ್ನೆಗಳಲ್ಲಿ ಇತರೆ ವಿಷಯುಗಳಿವೆ. ಸಂಬಂಧಪಟ್ಟವರಿಗೆ ತಿಳಿಸಿದ್ದೇನೆಂದು ಮುಂಚಿತವಾಗಿ ತಮಗೆ ತಿಳಿಸಿದ್ದೇನೆ. ಬೇರೆ ಬೇರೆ ಇಲಾಖೆಗಳಿಗೆ ಸಂಬಂಧಪಟ್ಟ ಉತ್ತರಗಳನ್ನು ನಾನು ಕೊಡಲಿಕ್ಕೆ ಬರುವುದಿಲ್ಲ. ತಾವು ವಿಚಾರ ಮಾಡಬೇಕು.

ಶ್ರೀ ಆರ್.ಎನ್. ನಾಯಕ್.—ಸಂಬಂಧಪಟ್ಟವರಿಂದ ಕೊಡಿಸಿ.

(ಗೊಂದಲ)

ಶ್ರೀ ಅಬ್ದುಲ್ ನಜೀರ್ ಸಾಬ್.—ಈಗ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ಗೆ ಸಂಬಂಧಪಟ್ಟಹಾಗೆ ಪ್ರಶ್ನೆ ಕೇಳಿದ್ದಾರೆ. ಅದನ್ನು ಸಂಬಂಧಪಟ್ಟವರಿಗೆ ವರ್ಗಾವಣೆ ಮಾಡಿದ್ದೇನೆ. ಆಮೇಲೆ ಇರಿಗೇಷನ್ ಡಿಪಾರ್ಟ್‌ಮೆಂಟ್ ಬಗ್ಗೆ ಪ್ರಶ್ನೆ ಕೇಳಿದ್ದಾರೆ, ಅದನ್ನು ಇರಿಗೇಷನ್ ಡಿಪಾರ್ಟ್‌ಮೆಂಟ್‌ಗೆ ಕಳಿಸಿದ್ದೇನೆ. ಆಯಾ ಇಲಾಖೆಯ ಪ್ರಶ್ನೆಗಳು ಬಂದಾಗ ಉತ್ತರ ಕೊಡುತ್ತಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ, ಕೆಲವು ಪ್ರಶ್ನೆಗಳಲ್ಲಿ ಹಲವಾರು ವಿವರಗಳನ್ನು ಮತ್ತು ಹಲವಾರು ವಿಷಯಗಳಿಗೆ, ವರ್ಷಗಳಿಗೆ ಸಂಬಂಧಪಟ್ಟಹಾಗೆ ವಿವರಗಳನ್ನು ಕೇಳಿದ್ದಾರೆ. ಅಂಥಾದ್ದರಲ್ಲಿ ಉತ್ತರಗಳನ್ನು ತರಿಸಿಕೊಳ್ಳುವುದಕ್ಕೆ ಸ್ವಲ್ಪ ತಡವಾಗಿದೆ. ನಾವು ಇದರಲ್ಲಿ ಅಸಮರ್ಥರು, ನಿರ್ಲಕ್ಷ್ಯ ಮನೋಭಾವನೆ ಹೊಂದಿದ್ದೇವೆ ಎನ್ನುವುದು ಯಾವುದೂ ಇಲ್ಲ. ಆದಷ್ಟು ಬೇಗ ಯಾವ ಯಾವ ಪ್ರಶ್ನೆಗಳಿಗೆ ಉತ್ತರ ಕೊಡಲಿಕ್ಕೆ ಆಗಿಲ್ಲ ಅಂತಹ ಪ್ರಶ್ನೆಗಳಿಗೆ ಉತ್ತರ ತರಿಸತಕ್ಕಂಥ ಜವಾಬ್ದಾರಿಯನ್ನು ನಾನು ತೆಗೆದುಕೊಂಡಿದ್ದೇನೆ ಎನ್ನುವ ಮಾತನ್ನು ನಾನು ಈಗಾಗಲೆ ಹೇಳಿದ್ದೇನೆ. ಮಾನ್ಯ ಬಂಗಾರಪ್ಪನವರು ನೀವು ಕೈಯಲ್ಲಿ ಅಥವಾ ತಲೆಮೇಲೆ ಹೊತ್ತುಕೊಂಡು ಹೋಗಬೇಕೇ ಎಂದು ಕೇಳಿದರು. ಅವರಿಗೆ ಗೊತ್ತಿರಬಹುದು ಎಂದು ಭಾವಿಸುತ್ತೇನೆ. ಒಂದೊಂದು ಸಲ ಟೆಲಿಫೋನ್ ನಮಗೆ ಸಿಕ್ಕುವುದಿಲ್ಲ, ಔಟ್ ಆಫ್ ಆರ್ಡರ್ ಆಗಿರುತ್ತದೆ ಸಿಕ್ಕುವುದಿಲ್ಲ.

SRI B. BASAVALINGAPPA.—Hon. Minister must talk like a Minister.

SRI A. LAKSHMISAGAR.—I am only talking like a Minister. Like a Minister ಅಲ್ಲ, as a Minister I am talking. ಆದುದರಿಂದ ಈ ಉತ್ತರಗಳನ್ನು ತರಿಸಿಕೊಳ್ಳುವುದಕ್ಕೆ ತಡವಾಗಿದೆ. ಉತ್ತರ ಕೊಡಬಾರದು ಎನ್ನುವ ಉದ್ದೇಶವಿಲ್ಲ. ತಮಗೆ ಉತ್ತರಗಳನ್ನು ಒದಗಿಸಿ ಕೊಡುತ್ತೇನೆ. Hon'ble member Mr. B. Basavalingappa perhaps does not know the new procedure that is being followed.

SRI B. BASAVALINGAPPA.—Mr. Speaker, Sir, he must answer as minister. If he comments on personal matters *i. e.* about deficiency or proficiency.....

ಶ್ರೀ ಎ. ಲಕ್ಷ್ಮೀಸಾಗರ್.—ಪರ್ಸನಲ್ ಏನೂ ಹೇಳಲಿಲ್ಲ. ಒಂದೊಂದು ಸಲ ಹೊಸದಾಗಿ ಬಂದಿರತಕ್ಕವರಿಗೆ ತಿಳಿಯದೇ ಇರಬಹುದು. ಈಗ ಕಾನೂನಿನನ್ವಯ ಪ್ರಶ್ನೆಗಳು ಪ್ರಿಂಟಾಗುತ್ತವೆ. ನಾವು ಗೊತ್ತಾದಂಥ ಸಮಯದಲ್ಲಿ ಬೇಗ ಉತ್ತರಗಳನ್ನು ಕೊಡಿಸುವುದಕ್ಕೆ ದಾರಿ ಮಾಡುತ್ತೇವೆ. ಒಂದೊಂದು ಸಲ ಉತ್ತರಗಳು ಬರುವುದಿಲ್ಲ, ವಿವರಗಳು ಬರುವುದಿಲ್ಲ.ಆದ್ದರಿಂದ ನಾನು ತಪ್ಪಿಗೆ ಸಲಹೆ ಮಾಡುವುದಕ್ಕೆ ಇಷ್ಟಪಡುತ್ತೇನೆ. ತಾವು ಬಿಸಿನೆಸ್ ಅಡ್ವೈಸರಿ ಕಮಿಟಿ ಮೀಟಿಂಗ್ ಕರೆಯಿರಿ. ಇದಕ್ಕೆ ಯಾವುದಾದರೂ ಮಾರ್ಗವನ್ನು ಕಂಡುಹಿಡಿಯುವುದಕ್ಕೆ ಈಗ ಸುಮ್ಮನೆ ಮಾಡೋಣ. ಈಗ ಸುಮ್ಮನೆ ಇದರ ಬಗ್ಗೆ ಹೇಳಿದರೆ ಪ್ರಯೋಜನವಾಗುವುದಿಲ್ಲ. ಆದ್ದರಿಂದ ಬಿಸಿನೆಸ್ ಅಡ್ವೈಸರಿ ಕಮಿಟಿ ಮುಂದೆ ಈ ವಿಷಯವನ್ನಿಟ್ಟು ವಿಚಾರ ಮಾಡೋಣ. ಅವರು ಏನು ಸಲಹೆ ಕೊಡುತ್ತಾರೋ ಅದನ್ನೂ ತೆಗೆದು ಕೊಳ್ಳೋಣ. ವಿವರಗಳನ್ನು ಕೊಡುವುದಕ್ಕೆ ಏನು ತೊಂದರೆ ಇದೆ ಎನ್ನುವುದನ್ನು ಹೇಳುವುದಕ್ಕೆ ನಾವೂ ಸಿದ್ಧವಾಗಿದ್ದೇವೆ. ಆದ್ದರಿಂದ ಉತ್ತರ ಕೊಡುವುದಕ್ಕೆ ಒಂದೆ ಹೋಗುತ್ತಾ ಇದ್ದೇವೆ ಎನ್ನುವಂಥ ಮಾತು ಇಲ್ಲ.

ಅಧ್ಯಕ್ಷರು.—ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಬಿಸಿನೆಸ್ ಅಡ್ವೈಸರಿ ಕಮಿಟಿ ಮೀಟಿಂಗ್ ಕರೆಯಬೇಕು ಎಂದು ಸಲಹೆ ಕೊಟ್ಟಿದ್ದಾರೆ. ನಾನು ಬಿಸಿನೆಸ್ ಅಡ್ವೈಸರಿ ಕಮಿಟಿ ಮೀಟಿಂಗ್ ಕರೆಯುತ್ತೇನೆ. ಬಿಸಿನೆಸ್ ಅಡ್ವೈಸರಿ ಕಮಿಟಿ ಮೆಂಬರ್ಸ್ ಕೂಡಿಕೊಂಡು ಯಾವರೀತಿ ಮಾಡಬೇಕು ಎಂದು ಸಲಹೆ ಕೊಡುತ್ತೀರೋ ಆ ರೀತಿ ಮಾಡೋಣ.

ಶ್ರೀ ಎಂ. ಎಸ್. ಕೃಷ್ಣನ್.—ಈಗ ಈ ಪ್ರಶ್ನೆಯನ್ನು ನಾಳೆ ತೆಗೆದುಕೊಳ್ಳುತ್ತೇನೆ ಎಂದು ಹೇಳಿದಿರಿ. ಇದು ಈ ಪ್ರಶ್ನೆಗೆ ಮಾತ್ರ ಅನ್ವಯಿಸುತ್ತದೆಯೋ ಅಥವಾ ಬೇರೆ ಪ್ರಶ್ನೆಗೂ ಅನ್ವಯಿಸುತ್ತದೆಯೋ ಮಾನ್ಯ ಬಸವಲಿಂಪ್ಪನವರು ಒಂದು ಪ್ರಶ್ನೆಯನ್ನು ಹಾಕಿದರು. ಅದು ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಗೆ ಸಂಬಂಧಪಟ್ಟಿದ್ದು. ಆ ಪ್ರಶ್ನೆಗೂ ಸರಿಯಾದ ಉತ್ತರ ಬಂದಿಲ್ಲ. ಬೇರೆ ಪ್ರಶ್ನೆಗೆ ಉತ್ತರ ಬರುವುದಕ್ಕೆ ಇಪ್ಪತ್ತು ನಾಳೆ ಎಂದು ಅದನ್ನು ತಡೆಹಿಡಿದಿದ್ದಿರಿ. ಈ ಪ್ರಶ್ನೆಯನ್ನು ತಡೆಹಿಡಿದಿದ್ದೀರಾ ?

ಅಧ್ಯಕ್ಷರು.—ಬಿಸಿನೆಸ್ ಅಡ್ವೈಸರಿ ಕಮಿಟಿ ಮೀಟಿಂಗ್ ಕರೆಯುತ್ತೇನೆ, ಅದರಲ್ಲಿ ನೀವು ನಾವೂ ಚರ್ಚೆ ಮಾಡೋಣ.

ಶ್ರೀ ಎಂ. ಎಸ್. ಕೃಷ್ಣನ್.—ಈ ರೀತಿ ಮಂತ್ರಿಗಳು ನಡೆದುಕೊಂಡರೆ ನಾವು ತಾಳಿಕೊಂಡು ಇರಬೇಕೇ, ಅದಕ್ಕೆ ನಾವು ತಯಾರಾಗಿಲ್ಲ. ಆ ಪ್ರಶ್ನೆಯನ್ನೂ ಕೂಡ ತಡೆಹಿಡಿದಿದ್ದೀರೋ ಏನೋ ಗೊತ್ತಿಲ್ಲ, ಮಾನ್ಯ ಅಧ್ಯಕ್ಷರು ಹೇಳಬೇಕು.

ಅಧ್ಯಕ್ಷರು.—ಅದೂ ಕೂಡ ತಡೆಹಿಡಿಯಲಾಗಿದೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ನನಗೆ ಗೊತ್ತಿರುವ ಹಾಗೆ ಹಳೆಯ ನಿಯಮಗಳ ಪ್ರಕಾರ.....

(ಗೊಂದಲ)

ಅಧ್ಯಕ್ಷರು.—ಮಾನ್ಯ ಸಂಸದೀಯ ವ್ಯವಹಾರಗಳ ಮಂತ್ರಿಗಳು ಬಿಸಿನೆಸ್ ಅಡ್ವೈಸರಿ ಕಮಿಟಿ ಮೀಟಿಂಗ್ ಕರೆಯಿರಿ ಎಂದು ಸಲಹೆ ಮಾಡಿದ್ದಾರೆ, ಕರೆಯುತ್ತೇನೆ, ಅದರಲ್ಲಿ ಚರ್ಚೆ ಮಾಡೋಣ.

ಶ್ರೀ ಎಸ್. ಬಂಗಾರಪ್ಪ.—ಹಿಂದಿನ ನಿಯಮಗಳ ಪ್ರಕಾರ ೧೫ ದಿವಸಗಳ ಟೈಂ ಇತ್ತು ಎಂದು ನನಗೆ ನೆನಪು. ಆಮೇಲೆ ಅದರ ಕಾಲವನ್ನು ಜಾಸ್ತಿಮಾಡಿ ಸುಮಾರು ಒಂದು ತಿಂಗಳು ಎಂದು ಇತ್ತು. ಮಾನ್ಯ ಮಂತ್ರಿಗಳು ಉತ್ತರ ತರಿಸಲಿಕ್ಕೆ ಕೆಲವು ಸಲ ಟೆಲಿಫೋನ್ ಕೆಟ್ಟು ಹೋಗಿರುತ್ತದೆ ಎಂದು ಹೇಳಿದರು. ಬೆಂಗಳೂರು ಟೆಲಿಫೋನ್ಸ್ ಫೋನ್ ಕೆಟ್ಟು ಹೋಗಿರುತ್ತದೆಯೇ ಸೆಕ್ರೆಟರಿಯೇಟ್‌ನದು, ಕಾರ್ಪೊರೇಷನ್‌ನದು ಎಲ್ಲಾ ಕೆಟ್ಟು ಹೋಗಿರುತ್ತದೆಯೋ ? ಬೇರೆ ವ್ಯವಸ್ಥೆ ಇಲ್ಲವೇ. ಇದರಲ್ಲಿ ಏನೋ ಹೆಚ್ಚೂ ಕಡಿಮೆಯಾಗಿದೆ.

ಶ್ರೀ ರಾಜವರ್ಧನ್.—ತಾವು ಗವರ್ನಮೆಂಟ್ ಆಫ್ ಇಂಡಿಯಾಗೆ ಹೇಳಿಸಿ ಸರಿಮಾಡಿಸಿ.

ಶ್ರೀ ಎಸ್. ಬಂಗಾರಪ್ಪ.—ನಾನು ಬೇರೆ ಉದ್ದೇಶದಿಂದ ಹೇಳಿದೆ. ಏನೆಂದರೆ, ಇದರಲ್ಲಿ ಸದಸ್ಯರ ಹಕ್ಕಿನ ಚಲಾವಣೆ ಪ್ರಶ್ನೆ ಬರುತ್ತದೆ. ಇದು ನಿಮ್ಮ ಪಕ್ಷದ ಮಾನ್ಯ ದೊಡ್ಡಮೇಟಿಯವರ

ಪ್ರಶ್ನೆ. ಅದು ಮುಂದಕ್ಕೆ ಹೋಯಿತು. ಯಾವ ಪಕ್ಷದ ಸದಸ್ಯರೇ ಆಗಿರಲಿ, ಸದಸ್ಯರ ಹಕ್ಕಿನ ಚಲಾವಣೆ ಪ್ರಶ್ನೆ ಬರುತ್ತದೆ. ಇಂತಹ ಸಂದರ್ಭದಲ್ಲಿ ಸರ್ಕಾರದಿಂದ ಸೌಜನ್ಯತೆಯ ಮಾತು ಬರಲಿಲ್ಲ. ಮಾನ್ಯ ನಜೀರ್‌ಸಾಬ್‌ರವರು ಇರಬಹುದು ಅಥವಾ ಪ್ರೊಫೆಸರ್ ಲಕ್ಷ್ಮೀಸಾಗರ್‌ರವರು ಇರಬಹುದು. ಉತ್ತರಗಳು ಬರುವುದಕ್ಕೆ ತಡವಾಗಿದೆ, ಅದಕ್ಕಾಗಿ ವಿಷಾಧಿಸುತ್ತೇವೆ ಎಂದು ಸೌಜನ್ಯಯುತವಾದ ಒಂದು ಮಾತು ಕೂಡ ಬರದೇ ಇರತಕ್ಕಂಥ ಸರ್ಕಾರಕ್ಕೆ ನೀವು ಭೀಮಾರಿ ಹಾಕದೇ ಇದ್ದೀರಲ್ಲಾ, ನಾವು ಹೇಗೆ ತಡೆದುಕೊಳ್ಳಬೇಕು ? ತಮ್ಮಿಂದ ನಮ್ಮ ಹಿತರಕ್ಷಣೆ ಆಗಬೇಕು. ಒಂದು ಮಾತನ್ನು ಹೇಳುತ್ತೇನೆ. ಯಾವ ಯಾವ ಪ್ರಶ್ನೆಗಳನ್ನು ಮುಂದಕ್ಕೆ ಹಾಕಿದಿರಿ ಅವುಗಳನ್ನು ಈ ಸಿಟ್ಟಿಂಗ್ ಮುಗಿಯುವುದರೊಳಗೆ ತಂದು ಉತ್ತರಗಳನ್ನು ಒದಗಿಸಿ.

ಅಧ್ಯಕ್ಷರು.—ನಾನೂ ಹೇಳುತ್ತಿದ್ದೇನೆ ಅವರೂ ಅಷ್ಯೂರೆನ್ಸ್ ಕೊಟ್ಟಿದ್ದಾರೆ ಪ್ರಯತ್ನ ಮಾಡೋಣ.

ಶ್ರೀ ಎಸ್. ಬಂಗಾರಪ್ಪ.—ನಾವೂ ನೀವೂ ಮಾಡುವುದಲ್ಲ. ನೀವು ತರಿಸುವ ಹಾಗಿದ್ದರೆ ನಾವೇಕೆ ಪ್ರಶ್ನೆ ಹಾಕಬೇಕಿತ್ತು.

ಸೈಟಿಂಗಳನ್ನು ಹಂಚುವ ಬಗ್ಗೆ

೫೬(೧೫೬) ಶ್ರೀ ಗೋಪಾಲ ಮುಕುಂದ ಕಾನಡೆ (ಶಿರಸಿ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ೧೯೮೫-೮೬ರಲ್ಲಿ ಳನೇ ದರ್ಜೆಯ ಹರಿಜನ ಸರ್ಕಾರಿ ನೌಕರರಿಗೆ ಕಡಿಮೆ ಬೆಲೆಯಲ್ಲಿ ನಿವೇಶನ ಕೊಡುವ ಬಗ್ಗೆ ಸರ್ಕಾರದವರು ತೀರ್ಮಾನ ತೆಗೆದುಕೊಂಡಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಆ ಮೇರೆಗೆ ಈ ವರೆವಿಗೂ ಎಷ್ಟು ಜನರಿಗೆ ನಿವೇಶನಗಳನ್ನು ಹಂಚಲಾಗಿದೆ ?

ಶ್ರೀ ಎ. ಲಕ್ಷ್ಮಿಸಾಗರ್ (ನಗರಾಭಿವೃದ್ಧಿ ಮಂತ್ರಿಗಳು).—

ಅ) ಳನೇ ದರ್ಜೆ ಸರ್ಕಾರಿ ನೌಕರರಿಗೆ ನಿವೇಶನ ಹಂಚಿಕೆಯ ಬಗ್ಗೆ ರಿಯಾಯ್ತಿ ಕೊಡುವ ವಿಚಾರದಲ್ಲಿ ೧೯೮೫-೮೬ ರಲ್ಲಿ ಯಾವುದೇ ನಿರ್ಣಯವನ್ನು ಕೈಗೊಂಡಿರುವುದಿಲ್ಲ.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಗೋಪಾಲ ಮುಕುಂದ ಕಾನಡೆ.—ನಾಲ್ಕನೇ ದರ್ಜೆಯ ಹರಿಜನ ಗಿರಿಜನ ನೌಕರರಿಗೆ ಸೈಟ್ ಕೊಡಬೇಕೆಂದು ತೀರ್ಮಾನವನ್ನು ಮಾಡಿದ್ದೀರಾ ಎಂದು ಪ್ರಶ್ನೆ ಕೇಳಿದೆ. ಅವರು ಎಲ್ಲಾ ನಾಲ್ಕನೇ ದರ್ಜೆಯ ನೌಕರರನ್ನು ಸೇರಿಸಿ ಹೇಳುತ್ತಿದ್ದಾರೆ. ಇದನ್ನು ಇನ್ನು ಮುಂದಾದರೂ ಮಾಡುತ್ತೀರಾ?

ಶ್ರೀ ಎ. ಲಕ್ಷ್ಮಿಸಾಗರ್.—ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಜ್ಞೆ ದಿನಾಂಕ ೧೮-೮-೮೪ರ ಪ್ರಕಾರ ಅವರು ನಿಯಮಾವಳಿಗಳನ್ನು ಮಾಡಿಕೊಂಡಿದ್ದಾರೆ. ಆ ನಿಯಮಾವಳಿ ಪ್ರಕಾರ ಹರಿಜನ ನಿಮ್ನವರ್ಗದವರಿಗೆ ಸೇರಿದಂತಹವರಿಗೆ ಒಟ್ಟು ವಿಲೇವಾರಿ ಮಾಡತಕ್ಕಂತಹ ಖಾಲಿ ನಿವೇಶನಗಳಲ್ಲಿ ಶೇಕಡ ೧೩ ರಷ್ಟನ್ನು ಕೊಡಬೇಕೆಂದು ಇದೆ. ಮಾನ್ಯ ಕಾನಡೆಯವರು ನಾಲ್ಕನೆದರ್ಜೆ ಹರಿಜನ ಗಿರಿಜನ ನೌಕರರಿಗೆ ಪ್ರತ್ಯೇಕವಾಗಿ ಏನಾದರೂ ಮಾಡುತ್ತೀರಾ ಎಂದು ಕೇಳಿದರು. ಆ ಗುಂಪಿಗೆ ಸೇರಿದಂತಹ ಜನರಿಗೆ ಅವಕಾಶವಿದೆಯೆನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಮುಂದಾದರೂ ಮಾಡುತ್ತೀರಾ ಎಂದು ಕೇಳಿದ್ದಾರೆ. ಇದು ಕಾನೂನು ಚೌಕಟ್ಟಿನಲ್ಲಿ ಬರುತ್ತದೆಯೇ ಎನ್ನುವುದನ್ನು ವಿಚಾರ ಮಾಡುತ್ತೇನೆ.

ಬೆಂಗಳೂರು ನಗರದ ಕೊಳಚೆ ಪ್ರದೇಶದ ಬಗ್ಗೆ

೫೭(೨೯೪) ಶ್ರೀ ರಾಜು ಗೌಡ (ಹನ್ನೂರ್).—ಮಾನ್ಯ ಗ್ರಾಮೀಣಾಭಿವೃದ್ಧಿ, ವಸತಿ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಬೆಂಗಳೂರು ನಗರದಲ್ಲಿ ಎಷ್ಟು ಕೊಳಚೆ ಪ್ರದೇಶಗಳಿವೆ?